ಓ.ಎಸ್. ನಂ. 178/2015

ಪಿ.ಡಬ್ಲ್ಯು: 02 Anjinappa

ದಿನಾಂಕ: 02.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು: ಪ್ರತಿವಾದಿ 1-3 ಪರ – ಶ್ರೀ AKP ವಕೀಲರಿಂದ.**

ನನಗೆ ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ಸಮನ್ಸ್ ಬಂದಿರುತ್ತದೆ. ಅದನ್ನು ನ್ಯಾಯಾಲಯಕ್ಕೆ ತಂದಿರುವುದಿಲ್ಲ. ಸಾಕ್ಷಿ ನುಡಿಯಲು ನನ್ನನ್ನು ವಾದಿ ಕರೆದಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ನನಗೆ ಚೆನ್ನಾಗಿ ಗೊತ್ತಿದ್ದಾರೆ. 1ನೇ ಪ್ರತಿವಾದಿ ಈಗ 6 ವರ್ಷಗಳಿಂದೆ ಮೃತಪಟ್ಟಿರುತ್ತಾರೆ. ಅವರು ಪತಿ ಎಸ್.ಬಿ.ಚನ್ನಬಸಪ್ಪ ಮೃತಪಟ್ಟಿರುತ್ತಾರೆ. ಅವರಿಗೆ 3 ಜನ ಗಂಡು ಒಂದು ಹೆಣ್ಣು ಒಟ್ಟು 4 ಜನ ಮಕ್ಕಳಿರುತ್ತಾರೆ. ಅವರ ಪೈಕಿ ಪರಶುರಾಮಪ್ಪ ಮೃತಪಟ್ಟಿರುತ್ತಾರೆ. ಪರಮೇಶಪ್ಪ ಎಂಬುವವರು ನನಗೆ ಗೊತ್ತೆ ಎಂದರೆ ಅವರು ಪರಶುರಾಮಪ್ಪ. ಪ್ರಮಾಣ ಪತ್ರ ಬರೆಸಲು ವಾದಿ ಮಾಹಿತಿ ತಿಳಿಸಿರುತ್ತಾರೆ.

ವಾದಿ ಹೇಳಿದ ಕಾರಣ ನಾನು ಸಾಕ್ಷ ನುಡಿಯುತ್ತಿದ್ದೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಮಾಹಿತಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಸರ್ವೇ ನಂಬರ್ ಹಾಗೂ ಅವುಗಳು ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಅದನ್ನು ಯಾರು ಉಳುಮೆ ಮಾಡುತ್ತಿದ್ದಾರೆ ಎಂದರೆ ಎಲ್ಲರು ಉಳುಮೆ ಮಾಡುತ್ತಿದ್ದಾರೆ. ಯಾವ ಸರ್ವೇ ನಂಬರ್ ನಲ್ಲಿ ಯಾರು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರ್ವೇ ನಂಬರ್ ಗಳು ನನಗೆ ಗೊತ್ತಾಗುವುದಿಲ್ಲ. ಆದರೆ ಕೆಂಪು ಭೂಮಿಯನ್ನು ವಾದಿ ಉಳುಮೆ ಮಾಡುತ್ತಿದ್ದಾರೆ. ಅವರ ಜಮೀನುಗಳ ಪಕ್ಕ ನನ್ನ ಜಮೀನು, ಮನೆ ಇರುವುದಿಲ್ಲ.

ಪಕ್ಷಗಾರರ ಅವರ ಮಧ್ಯ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ ಆದರೂ ಅವರೇ ಹಂಚಿಕೊಂಡು ಉಳುಮೆ ಮಾಡುತ್ತಿದ್ದರು. 2ನೇ ಪ್ರತಿವಾದಿಯ ಹೆಸರಿಗೆ ಆಸ್ತಿ ಇದೆ ಎಂದರೆ ಸರಿ. ಅವುಗಳನ್ನು ಆತನ ಸ್ವಂತ ದುಡುಮೆಯಿಂದ ಖರೀದಿ ಮಾಡಿದ ಆಸ್ತಿಗಳು ಎಂದರೆ ಅವುಗಳು ಒಟ್ಟಿಗೆ ಇದ್ದಾಗ ಖರೀದಿ ಮಾಡಿರುತ್ತಾರೆ. 2ನೇ ಪ್ರತಿವಾದಿಯ ಹೆಸರಿನಲ್ಲಿರುವ ಆಸ್ತಿಗಳು ಆತನೇ ಉಳುಮೆ ಮಾಡುತ್ತಿದ್ದರು ಎಂದರೆ ಸರಿ.

ವಾದಿಗಳ ಪಿತ್ರಾರ್ಜಿತ ಆಸ್ತಿಗಳನ್ನು ಅವರವರೇ ಹಂಚಿಕೊಂಡು ಉಳುಮೆ ಮಾಡುತ್ತಿದ್ದಾರೆ. 1ನೇ ಪ್ರತಿವಾದಿ ಹಾಗೂ ದುರ್ಗಮ್ಮರವರು ಒಂದೇ ಕುಟುಂಬದ ಸೊಸೆಯಂದಿರು ಎಂದರೆ ಸರಿ. ದುರ್ಗಮ್ಮನಿಗೆ ಸೇರಿದ ಆಸ್ತಿಯನ್ನು ಅವರು ಒಂದನೇ ಪ್ರತಿವಾದಿಗೆ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

ಅದನ್ನು ಅವರು ರೈಲ್ವೆ ಇಲಾಖೆಯರಿಗೆ ನೀಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಅವರಿಗೆ ಹಣ ಬಂದಿರುತ್ತದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನಗೂ, 2 ನೇ ಪ್ರತಿವಾದಿ ಹಾಗೂ 1 ನೇ ಪ್ರತಿವಾದಿ ಹಣ ಹಂಚಿಕೆಯ ವಿಚಾರದಲ್ಲಿ ಜಗಳವಾಗಿರುತ್ತದೆ ಎಂದರೆ ಸುಳ್ಳು. ದುರ್ಗಮ್ಮ ನನಗೆ ದೊಡ್ಡಮ್ಮ ಆಗಬೇಕು. ನನಗೆ ಆ ಸಮಯದಲ್ಲಿ ಹಣ ಹಂಚಿಕೆ ಮಾಡದೇ ಇದ್ದ ಕಾರಣ ನಾನು 2 ನೇ ಪ್ರತಿವಾದಿಯ ವಿರುದ್ದ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ವಾದಿ ತುಂಬ ಚೆನ್ನಾಗಿದ್ದೇವೆ ಎಂದರೆ ಸರಿ. ಹಳೇ ದ್ವೇಷ ವಿಚಾರವಾಗಿ ನಾನು 2 ನೇ ಪ್ರತಿವಾದಿಯ ವಿರುದ್ದ ಪೋಲಿಸ್ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ ನಾನು ವಾದಿಯೊಂದಿಗೆ ಈ ಸುಳ್ಳು ದಾವೆಯನ್ನು ದಾಖಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೂ ಹಾಗೂ ವಾದಿಗೂ ಪಿತ್ರಾರ್ಜಿತ ಆಸ್ತಿಗಳನ್ನು ಹೊರತುಪಡಿಸಿ ಇತರೆ ಆಸ್ತಿಗಳು ಎಲ್ಲಿದೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಗಳ ಪಿತ್ರಾರ್ಜಿತ ಆಸ್ತಿಗಳು ಪಾಲು ವಿಭಾಗ ಆಗಿರುವ ಬಗ್ಗೆ ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ 3 ನೇ ಪ್ರತಿವಾದಿಯೊಂದಿಗೆ ಚಿಕ್ಕೂಜ್ಜಿನಿಯಲ್ಲಿ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ಅವರೊಂದಿಗೆ ವಾಸಿಸುತ್ತಿದ್ದ ಕಾರಣ 3 ನೇ ಪ್ರತಿವಾದಿಗೆ ತನ್ನ ಸ್ವಂತ ಸ್ವತ್ತುಗಳನ್ನು 1 ನೇ ಪ್ರತಿವಾದಿ ಮರಣ ಶಾಸನ ಬರೆದಿರುತ್ತಾರೆ ಎಂದರೆ ಬರೆದಿರುವುದಿಲ್ಲ. ನನಗೆ ಈ ಬಗ್ಗೆ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲದೆ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.

ಓ.ಎಸ್. ನಂ. 178/2015

ಪಿ.ಡಬ್ಲ್ಯು: 02 Anjinappa